# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**

**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -4

## S.S.L.C. MODEL QUESTION PAPER-4 : 2024-25

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**ವಿಷಯ ಸಂಕೇತ : 85-K** | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 80 ] | [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8**

1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಪರಿಣಾಮ

   (A) ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡಿತು

   (B) ಕಲ್ಕತ್ತದಲ್ಲಿ ಸುಪ್ರೀಂ ಕೋರ್ಟ್ ಸ್ಥಾಪನೆಯಾಯಿತು

   (C) ಝಾನ್ಸಿ ಒಂದು ಸ್ವತಂತ್ರ ರಾಜ್ಯವಾಯಿತು

   (D) ನಾನಾ ಸಾಹೇಬರಿಗೆ ನಿವೃತ್ತಿ ವೇತನ ನೀಡಲಾಯಿತು

2. ಹಿರೋಷಿಮಾ ಮತ್ತು ನಾಗಾಸಾಕಿ ನಗರಗಳಿರುವುದು

   (A) ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ

   (B) ಜರ್ಮನಿಯಲ್ಲಿ

   (C) ಜಪಾನಿನಲ್ಲಿ

   (D) ಪೋಲ್ಯಾಂಡಿನಲ್ಲಿ

3. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಇರುವುದು

(A) ರೋಮ್‌ನಲ್ಲಿ

(B) ಪ್ಯಾರಿಸ್‌ನಲ್ಲಿ

(C) ಜಿನೇವಾದಲ್ಲಿ

(D) ನ್ಯೂಯಾರ್ಕ್‌ನಲ್ಲಿ

4. 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದವರು

(A) ಮಹಾತ್ಮ ಗಾಂಧೀಜಿ

(B) ಪಂಪ

(C) ಜ್ಯೋತಿಬಾ ಫುಲೆ

(D) ಬಸವಣ್ಣ

5. ಭಾರತದ ಸಿಲಿಕಾನ್ ಕಣಿವೆ ಇರುವುದು

(A) ಕರ್ನಾಟಕದಲ್ಲಿ

(B) ಮಹಾರಾಷ್ಟ್ರದಲ್ಲಿ

(C) ಗುಜರಾತಿನಲ್ಲಿ

(D) ಕೇರಳದಲ್ಲಿ

6. 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯಲ್ಪಡುವ ನಗರ

(A) ದಾವಣಗೆರೆ

(B) ಕೊಯಮತ್ತೂರು

(C) ಮುಂಬೈ

(D) ಇಂದೋರ್

7. ಭಾರತದಲ್ಲಿ ಹಣಕಾಸು ವರ್ಷ ಪ್ರಾರಂಭವಾಗುವುದು

(A) ಏಪ್ರಿಲ್ 1 ರಿಂದ

(B) ಜೂನ್ 5 ರಿಂದ

(C) ನವೆಂಬರ್ 1 ರಿಂದ

(D) ಮಾರ್ಚ್ 1 ರಿಂದ

8. ಭಾರತದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಪ್ರಾರಂಭಿಸಲಾದ ವರ್ಷ

(A) 1947 (B) 1954

(C) 1966 (D) 1978

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಭಾರತದ ಪ್ರಥಮ ರಾಷ್ಟ್ರಪತಿ ಯಾರು ?

10. ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿಯನ್ನು ಹೆಸರಿಸಿ.

11. ದತ್ತಿ ಸಮಿತಿಯನ್ನು ಏಕೆ ಸ್ಥಾಪಿಸಲಾಯಿತು ?

12. ನಮ್ಮ ಸಂವಿಧಾನದ ಯಾವ ವಿಧಿಯು ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸುತ್ತದೆ ?

13. ಭಾರತದಲ್ಲಿ ಚಳಿಗಾಲದಲ್ಲಿ ಉಷ್ಣಾಂಶ ಕಡಿಮೆಯಾಗಲು ಕಾರಣವೇನು ?

14. ಭಾರತದ ಪ್ರಥಮ ಕಾಗದ ಕೈಗಾರಿಕೆಯನ್ನು ಎಲ್ಲಿ ಸ್ಥಾಪಿಸಲಾಯಿತು ?

15. ಅಧಿಕಾರದ ವಿಕೇಂದ್ರೀಕರಣ ಎಂದರೇನು ?

16. ಪೂರೈಕೆದಾರ ಎಂದು ಯಾರನ್ನು ಕರೆಯಲಾಗುತ್ತದೆ ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $8 \times 2 = 16$**

17. ಕೇಂದ್ರ ಲೋಕ ಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

**ಅಥವಾ**

ಕೃಷಿ ಮತ್ತು ಆಹಾರ ಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

18. ದೊಂಬಿಗಳ ಸ್ವರೂಪವನ್ನು ತಿಳಿಸಿ.

**ಅಥವಾ**

ವರದಕ್ಷಿಣೆಯ ದುಷ್ಪರಿಣಾಮಗಳನ್ನು ತಿಳಿಸಿ.

[ Turn over

19. ಆ್ಯನಿ ಬೆಸೆಂಟರು ಥಿಯೋಸಾಫಿಕಲ್ ಸೊಸೈಟಿಯ ಚಟುವಟಿಕೆಗಳಿಗೆ ನವ ಚೈತನ್ಯವನ್ನು ನೀಡಿದರು. ಹೇಗೆ ?

20. ಜುನಾಗಢವನ್ನು ಭಾರತ ಒಕ್ಕೂಟದಲ್ಲಿ ಹೇಗೆ ವಿಲೀನಗೊಳಿಸಲಾಯಿತು ?

21. ಭಾರತದ ದ್ವೀಪಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

22. ಗೋಧಿ ಬೇಸಾಯಕ್ಕೆ ಅಗತ್ಯವಾದ ಭೌಗೋಳಿಕ ಅಂಶಗಳನ್ನು ವಿವರಿಸಿ.

23. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರವು ಹೆಚ್ಚಾಗುತ್ತಿದೆ. ಏಕೆ ?

24. ಬಳಕೆದಾರರ ಶೋಷಣೆಗೆ ಕಾರಣಗಳೇನು ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9 × 3 = 27**

25. ಎರಡನೆಯ ಕರ್ನಾಟಿಕ್ ಯುದ್ಧವನ್ನು ವಿವರಿಸಿ.

**ಅಥವಾ**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳನ್ನು ವಿವರಿಸಿ.

26. ಕಪ್ಪು ಮಣ್ಣು ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ ?

**ಅಥವಾ**

ನಿತ್ಯಹರಿದ್ವರ್ಣದ ಅರಣ್ಯಗಳು ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಹೇಗೆ ಭಿನ್ನವಾಗಿವೆ ?

27. ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

28. ಬ್ಯಾಂಕುಗಳ ಕಾರ್ಯಗಳನ್ನು ತಿಳಿಸಿ.

**ಅಥವಾ**

ಉದ್ಯಮಿಗಳ ಕಾರ್ಯಗಳನ್ನು ತಿಳಿಸಿ.

29. ಬ್ರಿಟಿಷ್ ಆಡಳಿತದಲ್ಲಿ ಪೊಲೀಸ್ ವ್ಯವಸ್ಥೆಯು ನಿರಂತರ ಬದಲಾವಣೆಗೆ ಒಳಪಟ್ಟಿತು. ಹೇಗೆ ?

30. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ.

31. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳನ್ನು ವಿವರಿಸಿ.

32. ನಿರುದ್ಯೋಗವು ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಹೇಗೆ ?

33. ದೂರಸಂವೇದಿ ತಂತ್ರಜ್ಞಾನದ ಪ್ರಾಮುಖ್ಯತೆಯನ್ನು ವಿಶ್ಲೇಷಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $4 \times 4 = 16$**

34. ಬ್ರಿಟಿಷರ ವಿರುದ್ಧದ ಪುಟ್ಟಬಸಪ್ಪನ ಹೋರಾಟವು ಸದಾ ಸ್ಮರಣೀಯವಾದುದು. ಸಮರ್ಥಿಸಿ.

**ಅಥವಾ**

ಆರ್ಯ ಜನಾಂಗವನ್ನು ಜನಪ್ರಿಯಗೊಳಿಸುವ ಹಿಟ್ಲರನ ಮಹತ್ವಕಾಂಕ್ಷೆಯು ಸಾಮೂಹಿಕ ಕಗ್ಗೊಲೆಗಳಿಗೆ ಕಾರಣವಾಯಿತು. ಸಮರ್ಥಿಸಿ.

35. ಬ್ರಿಟಿಷರ ವಿರುದ್ಧದ ಸಂತಾಲರ ಹೋರಾಟವನ್ನು ವಿವರಿಸಿ.

36. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಿಂಗತ್ವ ಅಲ್ಪಸಂಖ್ಯಾತರ ಸಬಲೀಕರಣಕ್ಕೆ ಹಲವಾರು ಉಪಕ್ರಮಗಳನ್ನು ಕೈಗೊಂಡಿವೆ. ಸ್ಪಷ್ಟೀಕರಿಸಿ.

37. ಭೂಕಂಪದ ಕಾರಣ ಮತ್ತು ಪರಿಣಾಮಗಳೇನು ?

**VI.** 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5 ನ್ನು ಗುರುತಿಸಿ :** **1 × 5 = 5**

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಕೋಸಿ ಅಣೆಕಟ್ಟು

c) ಕೈಗಾ

d) ವಿಶಾಖಪಟ್ಟಣಂ

e) ಮನ್ನಾರ್ ಖಾರಿ

f) ಕೃಷ್ಣ ಮೇಲ್ದಂಡೆ ಯೋಜನೆ

g) ಗವಾಹಟಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ಹಿಮಾಲಯ ಪರ್ವತವು ಭಾರತೀಯರಿಗೆ ಹೇಗೆ ಸಹಕಾರಿಯಾಗಿದೆ ಎಂದು ವಿವರಿಸಿ. **5**